# 2020-2021 ನೇ ಸಾಲಿನ ರೂಪಣಾತ್ಮಕ –1–4 ಪ್ರಶ್ನೆಪತ್ರಿಕೆಗಳು ಹಾಗೂ ಮಾದರಿ ಉತ್ತರಗಳು


ರಚನೆ :– ಶ್ರೀ ರಂಗನಾಥ ಎನ್ ವಾಲ್ಮೀಕಿ

ಸಹ ಶಿಕ್ಷಕರು

ಸರಕಾರಿ ಪ್ರೌಢ ಶಾಲೆ ದೇವಿಕೊಪ್ಪ

ತಾ;–ಕಲಘಟಗಿ ಜಿ:–ಧಾರವಾಡ

ಜಂಗಮವಾಣಿ 9945054579





Use epaper, save Trees

Above line hide when print out

# ಸರಕಾರಿ ಪ್ರೌಢ ಶಾಲೆ ದೇವಿಕೊಪ್ಪ ತಾ.ಕಲಘಟಗಿ ಜಿ.ಧಾರವಾಡ

## ಪ್ರಥಮ ರೂಪಣಾತ್ಮಕ ಪರೀಕ್ಷೆ

ವಿಷಯ:-ಕನ್ನಡ

ವರ್ಗ :- ೧೦

ಪ್ರಶ್ನೆ -೧) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. **2*1= 2**

೧) ರಾಹಿಲ್ ಯಾರು ?

೨) ಸರ್ವ ಧರ್ಮ ಸಮ್ಮೇಳನ ಎಲ್ಲಿ ನಡೆಯಿತು ?

ಪ್ರಶ್ನೆ -೨) ಈ ಕೆಳಗಿನ ಪ್ರಶ್ನೆ ಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ **2*2=4**

೧) ಡಾಕ್ಟರ( ಸೈನಿಕ )ಗೆ ವಿಮಾನದ ಪೈಲಟ್ ಏನು ಹೇಳಿದ ?

೨) ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ ?

ಪ್ರಶ್ನೆ -೩) ಈ ಕೆಳಗಿನ ಹೇಳಿಕೆಗಳ ಸಂದರ್ಭ,ಸ್ವಾರಸ್ಯ ವಿವರಿಸಿರಿ ( ಬೇಕಾದ ಒಂದಕ್ಕೆ)

**3*1=3**

೧) "ಪ್ರೀತಿಯ ಹಣತೆಯ ಹಚ್ಚೋಣ"

೨) "ದಯವಿಟ್ಟು ಪರೀಕ್ಷಿಸುವೆ,ನೀವೂ ಬಿಸಿ ನೀರು ಸಿದ್ದಪಡಿಸಿ



Use epaper, save Trees
Above line hide when print out

ಪ್ರಶ್ನೆ -೪) ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ

**1*4=4**

ನೀಲ ಮೇಘ -------------------- ಯುಗ ಯುಗಗಳ -------------

------------------------------------ ಅಥವಾ ---------------------------------

------------------------------------ ---------------------------------

ಹಕ್ಕಿ ಹಾರುತ್ತಿದೆ ನೋಡಿದಿರಾ ? ಹಕ್ಕಿ ಹಾರುತ್ತಿದೆ ನೋಡಿದಿರಾ

ಪ್ರಶ್ನೆ -೫) ಈ ಕೆಳಗಿನ ವ್ಯಾಕರಣಾಂಶ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ.

**1x3=3**

ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ

೧) ಕನ್ನಡ ವರ್ಣಮಾಲೆಯಲ್ಲಿನ ಯೋಗವಾಹಕಗಳ ಸಂಖ್ಯೆ

೧) ಆರು ೨) ಏಳು ೩) ಐದು ೪) ಎರಡು

೨) ಈ ಕೆಳಗಿನವುಗಳಲ್ಲಿ ದ್ವಿರುಕ್ತಿ ಪದ

೧) ಸರ ಸರ ೨) ಜುಳು ಜುಳು ೩) ಬೇಡ ಬೇಡ ೪) ಪಳ ಪಳ

೩) ಸಪ್ತಮಿ ವಿಭಕ್ತಿ ಹಳೆಗನ್ನಡ ಪ್ರತ್ಯಯ

೧) ಮ್ ೨) ಇಂದಂ ೩) ಒಳ್ ೪) ಅತ್ತಣಿಂ

ಪ್ರಶ್ನೆ - ೬) ಈ ಕೆಳಗಿನ ಪ್ರಶ್ನೆಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ ( ಬೇಕಾದ ೧ ಕ್ಕೆ).

**1x4=4**

೧) ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿ ಪಾಲಿಗೆ ಹೇಗೆ ನಿಜವಾಗಿದೆ ?

೨) ಶಬರಿ ಚಿಂತೆ ಹಿಂಗಿ ಹೋದ ಸಂದರ್ಭ - ಸ್ವಾರಸ್ಯ ವಿವರಿಸಿರಿ.



Use epaper, save Trees
Above line hide when print out

# ಸರಕಾರಿ ಪ್ರೌಢ ಶಾಲೆ ದೇವಿಕೊಪ್ಪ ತಾ.ಕಲಘಟಗಿ ಜಿ. ಧಾರವಾಡ

ಮಾದರಿ ಉತ್ತರ ಪತ್ರಿಕೆ– ರೂಪಣಾತ್ಮಕ ಪರೀಕ್ಷೆ–1

ವರ್ಗ :–10 ವಿಷಯ :– ಕನ್ನಡ

ಪ್ರಶ್ನೆ– 1) ರಾಹಿಲ್ ಸೈನಿಕ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಒಬ್ಬ ಡಾಕ್ಟರ್

2) ಸರ್ವ ಧರ್ಮ ಸಮ್ಮೇಳನವೂ ಚಿಕಾಗೋದಲ್ಲಿ ನಡೆಯಿತು.

ಪ್ರಶ್ನೆ–2) ಎರಡು–ಮೂರು ವಾಕ್ಯದ ಉತ್ತರಗಳು

1) ಡಾಕ್ಟರ್ ರೇಡಿಯೋ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ.ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೇ ಈ ಹಾಳಾದ ಕತ್ತಲೆಯಲ್ಲಿ ಏನೂ ಕಾಣಿಸುತ್ತಿಲ್ಲ ಎಂದು ಹೇಳಿದನು.

2) ಕಾಡುಗಳು ಹೆಚ್ಚಿನ ಬಿಸಿಲಿನ ತಾಪದಿಂದ ಬರಡಾಗಿವೆ.ಕಾಡುಗಳು ಒಣಗಿವೆ.ಕಾಡು ಮೇಡಗಳು ಬರಡಾಗಿವೆ ವಸಂತ ಋತುಗಾಗಿ ಕಾಯುತ್ತಿವೆ. ವಸಂತ ಋತು ಬಂದರೆ ಗಿಡಮರಗಳಲ್ಲಿ ಹೊಸ ಚಿಗುರುಗಳಾಗುತ್ತವೆ.ಅದಕ್ಕಾಗಿ ವಸಂತ ಮುಟ್ಟಬೇಕಿದೆ.



Use epaper, save Trees
Above line hide when print out

ಪ್ರಶ್ನೆ–3) ಸಂದರ್ಭದೊಡನೆ ವಿವರಿಸಿರಿ

1) "ದಯವಿಟ್ಟು ನಾನಾಕೆಯನ್ನು ಪರೀಕ್ಷಿಸುವೆ ನೀವೂ ಬೀಸಿ ನೀರು ಸಿದ್ದಪಡಿಸಿ"

ಆಯ್ಕೆ :– ಈ ಮೇಲಿನ ವಾಕ್ಯವನ್ನು ಸಾರಾ ಅಬೂಬಕ್ಕರವರ ಚಪ್ಪಲಿಗಳು ಎಂಬ ಕೃತಿಯಿಂದ ಆಯ್ದ ಯುದ್ದ ಎಂಬ ಗದ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :–ರಾಹಿಲನು ತನ್ನನ್ನು ರಕ್ಷಿಸಿಕೊಳ್ಳುವ ಸಲುವಾಗಿ ನದಿ ದಡ ಬಿಟ್ಟು ಮುಂದಕ್ಕೆ ಬರುವಾಗ ದೂರದಲ್ಲಿ ಒಬ್ಬ ಮಹಿಳೆ ಆರ್ತನಾದ ಕೇಳಿ ಬಂದು ಅದಕ್ಕೆ ರಾಹಿಲನು ಬೇಗ ಬೇಗನೆ ಮನೆಯೊಳಗೆ ಹೋದ ಅಲ್ಲಿ ಒಬ್ಬ ಅಜ್ಜಿಯ ಸೊಸೆ ಹೆರಿಗೆ ನೋವಿನಿಂದ ನರಳುವದನ್ನು ನೋಡಿ ಈ ಮೇಲಿನ ಮಾತನ್ನು ರಾಹಿಲ್ ಮುದುಕಿಗೆ ಹೇಳುತ್ತಾನೆ.

ಸ್ವಾರಸ್ಯ :– ಇಲ್ಲಿ ರಾಹಿಲನು ತುಂಬಾ ಗಾಯಗೊಂಡಿದ್ದ ಆ ಗಾಯವನ್ನು ಲೆಕ್ಕಿಸದೆ ತಾನೊಂಬ ಡಾಕ್ಟರಾಗಿ ಆಕೆಯನ್ನು ಪರೀಕ್ಷಿಸಿತೊಡಗಿ ಸಹಾಯ ಗುಣ ಮೆರೆಯುವುದು ಇಲ್ಲಿನ ಸ್ವಾರಸ್ಯವಾಗಿದೆ.

ಪ್ರಶ್ನೆ –4 ) ಪದ್ಯ ಪೂರ್ಣಗೊಳಿಸಿದೆ.

ನೀಲ ಮೇಘ ಮಂಡಲ ಸಮಬಣ್ಣ<br>
ಮುಗಿಲಿಗೆ ರೆಕ್ಕೆಗಳೊಡೆದವು ಅಣ್ಣಾ<br>
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು<br>
ಸೂರ್ಯ ಚಂದ್ರರು ಮಾಡಿದ ಕಣ್ಣಾ<br>
ಹಕ್ಕಿ ಹಾರುತಿದೆ ನೋಡಿದಿರಾ?

ಪ್ರಶ್ನೆ –5)

1) ಎರಡು
2) ಬೇಡ ಬೇಡ
3) ಒಳ್

ಪ್ರಶ್ನೆ –6)

ಶಬರಿಗೆ ಜನರು ಶ್ರೀರಾಮನ ಕುರಿತು ಗುಣಗಾನ ಮಾಡಿರುತ್ತಾರೆ.ಅವನು ಧೀರನೂ,ಶೂರನೂ,ವೀರನೂ ಎಂದು ಹೇಳಿರುತ್ತಾರೆ.ಅಂಥಹ ದೇವತಾಪುರುಷ ರಾಮನನ್ನು



Use epaper, save Trees
Above line hide when print out

ಕಾಣಬೇಕೆಂಬುದು ಶಬರಿಯ ಜೀವನದ ಆಸೆ ಬಯಕೆ ಆಗಿರುತ್ತದೆ.ಈ ವಿವಾರವನ್ನು ಮತಂಗಾಶ್ರಮದ ಮುನಿಗಳ ಹತ್ತಿರ ಹೇಳಿರುತ್ತಾರೆ.ಆಗ ಆ ಮುನಿಗಳು ನಿನ್ನ ಬದುಕಿನ ಆಶೆ ಈಡೇರುತ್ತದೆ ಎಂದು ಹೇಳಿದ್ದರು .ರಾಮ ಬರುವನೆಂದು ಶಬರಿ ಪ್ರತಿ ದಿನ ಹೂವುಗಳನ್ನು ಸಂಗ್ರಹಿಸಿ ಮಾಲೆ ಮಾಡಿಕೊಳ್ಳುವಳು,ರಾಮ ಬರುವನೆಂದು ರುಚಿಯಾದ ಹಣ್ಣುಗಳನ್ನು ಸಮಗ್ರಹಿಸಿ ಇಟ್ಟುಕೊಳ್ಳುವಳು.ಹಾಗೆ ಮಧು ಪರ್ಕವನ್ನು ಸಂಗ್ರಹ ಮಾಡಿಕೊಂಡಿವಳು ಈ ಕಾರ್ಯ ನಿತ್ಯ ಮಾಡುವಳು ಹಲವಾರು ದಿನ ಕಳೆದರೆ ರಾಮ ಬರದೇ ಇದ್ದದರು ಶಬರಿ ಮಾತ್ರ ತನ್ನ ನಿತ್ಯ ಕಾಯಕ ಮರೆಯುತ್ತಿರಲಿಲ್ಲ.ಒಂದು ದಿನ ರಾಮ ಸೀತೆಯನ್ನು ಹುಡುಕುತ್ತಾ ಮತಂಗಾಶ್ರಮಕ್ಕೆ ಬರುವರು ಆಗ ಶಬರಿ ಆದ ಸಂತೋಷ ಬಹಳ ರಾಮನನ್ನು ನೋಡುವೆ ಮಾತನಾಡುವೆ ಎಂಬ ಶಬರಿ ನಂಬಿಕೆ ನಿಜವಾಯಿತು.

## ಸರಕಾರಿ ಪ್ರೌಢ ಶಾಲೆ ದೇವಿಕೊಪ್ಪ ತಾ:–ಕಲಘಟಗಿ ಜಿ:–ಧಾರವಾಡ

## ರೂಪಣಾತ್ಮಕ ಪರೀಕ್ಷೆ–2

ವಿಷಯ :–ಕನ್ನಡ

ವರ್ಗ :–10

ಪ್ರಶ್ನೆ :–1) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ
3*1=3

1) ವೆಸ್ಟ ಮಿನಿಸ್ಟರ್ ಅಬೆ–ಇದು ಯಾರ ಸ್ಮಾರಕವಾಗಿದೆ ?

2) ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?

3) ಪುಟ್ಟ ಪೋರಿ ಏನು ಮಾಡುತ್ತಿದ್ದಳು

ಪ್ರಶ್ನೆ :–2) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ
2*2=4



Use epaper, save Trees
Above line hide when print out

1) ವ್ಯೂಲವರ್ಥ–ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು ?

2) ಕುಂತಿ,ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು ?

ಪ್ರಶ್ನೆ :–3)ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭದೊಡನೆ ವಿವರಿಸಿರಿ( ಬೇಕಾದ 1 ಕ್ಕೆ ) 1*3=3

1) ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ

2) ಹೊತ್ತು ! ಹೊತ್ತು ! ಹೊತ್ತೇ ಹಣ

ಪ್ರಶ್ನೆ :–4) ಈ ಕೆಳಗಿನ ಬೇಕಾದ ಒಬ್ಬರ ಕುರಿತು ಕವಿ/ಲೇಖಕರ ಪರಿಚಯ ಬರೆಯಿರಿ 1*3=3

1) ಡಿ.ಎಸ್ ಜಯಪ್ಪಗೌಡ

2) ಕುಮಾರವ್ಯಾಸ

ಪ್ರಶ್ನೆ :–5) ಈ ಕೆಳಗಿನ ಬಹುಅಂಶ ಆಯ್ಕೆ ಮಾದರಿ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು 1*4=4

ಕೊಡಲಾಗಿದೆ.ಅದರಲ್ಲಿ ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ.

1) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

1.ಆವರಣ ಚಿಹ್ನೆ 2.ವಿವರಣಾತ್ಮಕ ಚಿಹ್ನೆ 3.ವಾಕ್ಯವೇಷ್ಟನ ಚಿಹ್ನೆ 4.ಉದ್ದರಣ ಚಿಹ್ನೆ

2) ಅಮಾನತು–ಈ ಪದ ಈ ಭಾಷೆಯಿಂದ ಬಂದಿದೆ.

1.ಉರ್ದು 2,ಅರಬ್ಬೀ 3.ಹಿಂದೂಸ್ಥಾನಿ 4.ಪೋರ್ಚುಗೀಸ್



Use epaper, save Trees
Above line hide when print out

3) ಭೇದವಿಲ್ಲ–ಈ ಪದ ಈ ಸಂಧಿಗೆ ಉದಾಹರಣೆಯಾಗಿದೆ.

1.ಲೋಪ ಸಂಧಿ 2.ಆಗಮ ಸಂಧಿ 3.ಆದೇಶ ಸಂಧಿ 4.ಗುಣ ಸಂಧಿ

4) ಸರ ಸರ–ಈ ಪದದ ವ್ಯಾಕರಣಾಂಶ ಇದಾಗಿದೆ.

1. ಅನುಕರಣಾವ್ಯಯ 2.ದ್ವಿರುಕ್ತಿ 3.ಜೋಡು ನುಡಿ 4.ನುಡಿಗಟ್ಟು

ಪ್ರಶ್ನೆ :–6) ಈ ಕೆಳಗಿನ ಬೇಕಾದ ಒಂದು ಗಾದೆ ಮಾತನ್ನು ಕುರಿತು ವಿಸ್ತರಿಸಿ ಬರೆಯಿರಿ 1*3=3

1) ಕೈ ಕೆಸರಾದರೆ ಬಾಯಿ ಮೊಸರು

2) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

3) ಮಾಡಿದ್ದುಣ್ಣೋ ಮಹಾರಾಯ

ಸರಕಾರಿ ಪ್ರೌಢ ಶಾಲೆ ದೇವಿಕೊಪ್ಪ ತಾ:–ಕಲಘಟಗಿ ಜಿ:–ಧಾರವಾಡ

ರೂಪಣಾತ್ಮಕ ಪರೀಕ್ಷೆ–೨

ವರ್ಗ :–೧೦ | ಮಾದರಿ ಉತ್ತರಗಳು | ವಿಷಯ :–ಕನ್ನಡ

ಪ್ರಶ್ನೆ–೧)



Use epaper, save Trees
Above line hide when print out

೧)ಇದು ದಿವಂಗತರಾದ ಕವಿಗಳ,ಸಾಧು ಸಂತರ,ರಾಜಕಾರಣಿಗಳ ಸ್ಮಾರಕವಾಗಿದೆ.
೨) ನಿಶಸ್ತ್ರೀಕರಣ ಕಾಯ್ದೆ ವಿರೋಧಿಸಿದ್ದು
೩) ಮುಸುರಿ ತಿಕ್ಕುತ್ತಿದ್ದಳು.

ಪ್ರಶ್ನೆ –೨

೧) ಇಲ್ಲಿ ಬೂಟು,ಕಾಲು ಚೀಲ,ಚಣ್ಣ,ಸಾಬೂನು,ಔಷದ,ಪುಸ್ತಕ,ಅಡುಗೆ ಪಾತ್ರೆ,ಇಲೆಕ್ಟ್ರೀಕ್ ದೀಪದ ಸಾಮಾನುಗಳು,ಪೋಟೋ,ಹೂವುಗಳು,ಯುದ್ದ ಸಾಮಗ್ರಿಗಳು ಇಲ್ಲಿ ದೊರೆಯುತ್ತವೆ.

೨) ಕುಂತಿಯೂ ಸೂರ್ಯನ ಅನುಗ್ರಹದಿಂದ ಕರ್ಣನನ್ನು,ಯಮ ಧರ್ಮನ ಅನುಗ್ರಹದಿಂದ ಧರ್ಮರಾಯನನ್ನೂ,ವಾಯುವಿನ ಅನುಗ್ರಹದಿಂದ ಭೀಮನನ್ನೂ,ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು.ಮಾದ್ರಿಯು ಅಶ್ವಿನಿ ದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

ಪ್ರಶ್ನೆ –೩

೧) "ಹೊಡೆದರೋ ಗುಂಡ ಕರುಣ ಇಲ್ಲದ್ಹಂಗ"

ಆಯ್ಕೆ :–ಈ ವಾಕ್ಯವನ್ನು ಡಾ.ಬಿ ಎಸ್ ಗದ್ದಗಿಮಠ ಅವರು ಸಂಪಾದಿಸಿರುವ "ಕನ್ನಡ ಜನಪದ ಗೀತೆಗಳು" ಎಂಬ ಕೃತಿಯಿಂದ ಆಯ್ದ ಹಲಗಲಿಯ ಬೇಡರು ಎಂಬ ಲಾವಣಿಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:–ಬ್ರೀಟಿಷರು ಜಾರಿಗೆ ತಂದ ನಿಶಸ್ತ್ರೀಕರಣ ಕಾಯ್ದೆಯನ್ನು ಹಲಗಲಿ ಬೇಡರು ವಿರೋಧಿಸಿದರು ಅಲ್ಲದೇ ಬ್ರೀಟಿಷ್ ಅಧಿಕಾರಿಯನ್ನೂ ಕೊಂದರು ಇದರಿಂದ ರೊಚ್ಚಿಗೆದ್ದ ಕುಂಪಣಿ ಸರಕಾರದವರೂ ಹಲಗಲಿ ಮೇಲೆ ದಾಳಿ ಮಾಡಿ ಸಿಕ್ಕ ಸಿಕ್ಕವರನ್ನೂ ಕರುಣೆಯಿಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲಾವಣಿಕಾರ ಈ ಮಾತು ಹೇಳುತ್ತಾನೆ.

ಸ್ವಾರಸ್ಯ :–ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿ ಕೊಲ್ಲುವ ಬ್ರಿಟೀಷರ್ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

ಪ್ರಶ್ನೆ –೪)

೨)ಕುಮಾರ ವ್ಯಾಸ :_ಇವರು ಕ್ರಿ.ಶ ೧೪೩೦ ರಲ್ಲಿ ಗದಗ ಪ್ರಾಂತ್ಯದ ಕೋಳಿವಾಡ ಎಂಬಲ್ಲಿ ಜನಿಸಿದರು.ಇವರು ಕರ್ನಾಟಕ ಭಾರತ ಕಥಾಮಂಜರಿ,ಐರಾವತ ಎಂಬ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಬಿರುದು ದೊರೆತಿದೆ.



Use epaper, save Trees
Above line hide when print out

ಪ್ರಶ್ನೆ–೫)

೧) ಚಿನ್ನೆ
೨) ಅರಬ್ಬೀ
೩) ಆಗಮ ಸಂಧಿ
೪) ಅನುಕರಣಾವ್ಯಯ

ಪ್ರಶ್ನೆ –೬ ಗಾದೆ ವಿಸ್ತರಣೆ

ಗಾದೆ ವೇದಗಳಿಗೆ ಸಮ.ಇವು ಹಿರಿಯರ ಜೀವನದ ಅನುಭವದ ನುಡಿಗಳಾಗಿವೆ.ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಸಾರ್ವಕಾಲಿಕ ಸತ್ಯ ನುಡಿ.ಅಂಥಹ ಅನೇಕ ಗಾದೆ ಮಾತುಗಳಲ್ಲಿ ಕೈ ಕೆಸರಾದರೆ ಬಾಯಿ ಮೊಸರು ಕೂಡಾ ಒಂದಾಗಿದೆ.

ಮನುಷ್ಯ ಬದುಕಿನಲ್ಲಿ ಉನ್ನತಿ ಸಾಧಿಸಬೇಕಾದರೆ ಆತ ನ್ಯಾಯಯುತವಾಗಿ ಯಾವುದಾದರೂ ಒಂದು ಉದ್ಯೋಗದಲ್ಲಿ ತೊಡಗಬೇಕು.ನಾವೂ ಸದಾ ಒಂದಿಲ್ಲೊಂದು ಕೆಲಸ ಮಾಡುತ್ತಾ ಜೀವನ ನಿರ್ವಹಿಸಬೇಕು.ನಮ್ಮ ಸ್ವಾವಲಂಬಿ ಬದುಕಿಗೆ ಕಾಯಕ ಅತಿ ಅಗತ್ಯ.ಕೈ ಕೆಸರು ಎಂದರೆ ನಾವೂ ಕಷ್ಟ ಪಟ್ಟು ದುಡಿಮೆ ಮಾಡಬೇಕು ಅದರಿಂದ ನಮಗೆ ಹಣ ನೆಮ್ಮದಿ ಎಲ್ಲವೂ ಸಿಗುತ್ತದೆ.ಕಾಯಕವೇ ಕೈಲಾಸ ಎಂಬ ವಾಣಿ ಇಲ್ಲಿ ಸ್ಮರಣಿಯ.ನಾವೂ ನಿಷ್ಠೆ ,ಪ್ರಾಮಾಣಿಕತೆಯಿಂದ ಕಾಯಕದಲ್ಲಿ ತೊಡಗಿದರೆ ನಮಗೆ ಸಮಾಜದಲ್ಲಿ ಬೆಲೆ ಗೌರವ ಇದೆ.ಕಾಯಕ ನಿರ್ವಹಣೆಯಿಂದ ಹಣ ಸಂಪಾದಿಸಿ ನಮ್ಮ ಬದುಕಿನ ಕೇಲವೂ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು ಎಂಬುದು ಈ ಗಾದೆ ಮಾತಿನ ಅರ್ಥವಾಗಿದೆ.

## ಸರಕಾರಿ ಪ್ರೌಢ ಶಾಲೆ ದೇವಿಕೊಪ್ಪ ತಾ–ಕಲಘಟಗಿ ಜಿ–ಧಾರವಾಡ

## ರೂಪಣಾತ್ಮಕ ಪರೀಕ್ಷೆ–3

ವರ್ಗ–10 ಅಂಕಗಳು–20



Use epaper, save Trees
Above line hide when print out

ಪ್ರಶ್ನೆ–1) ಈ ಕೆಳಗಿನ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ.
3*1=3

1).'ಬೆಟ್ಟದಾವರೆ'–ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ.

1.ದ್ವಿಗು 2.ಕರ್ಮಧಾರೆಯ 3.ಅಂಶಿ 4.ತತ್ಪುರುಷ

2). ಕಾರ್ಯ–ಪದದ ತದ್ಭವ ರೂಪ

1.ಕಾಯಕ 2.ಕೆಲಸ 3.ಕಜ್ಜ 4.ಅಜ್ಜ

3) 'ಕೌರವರೊಳ್'–ಈ ಪದದಲ್ಲಿ ಬಂದಿರುವ ವಿಭಕ್ತಿ ಪ್ರತ್ಯಯ

1.ಚತುರ್ಥಿ 2.ಸಪ್ತಮಿ 3.ದ್ವಿತೀಯಾ 4.ತೃತೀಯಾ

ಪ್ರಶ್ನೆ–2) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ
4*1=4

1.ದಿನಪಸುತ–ಎಂದರೆ ಯಾರು ?

2.ಕವಿಯು ನೋಡಿದ ಅಡಿಕೆಯ ತೋಟ ಎಲ್ಲಿದೆ ?

3.ಶಾನು ಭೋಗರ ಬ್ರಹ್ಮಾಸ್ತ್ರ ಯಾವುದು ?

4.ಇಂದಲ್ಲ ನಾಳೆ ಫಲ ಕೊಡುವ ಅಂಶಗಳು ಯಾವುವು ?



Use epaper, save Trees
Above line hide when print out

ಪ್ರಶ್ನೆ-3) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲಿ ಉತ್ತರಿಸಿರಿ(2 ಕ್ಕೆ) 2*2=4

1.ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?

2.ಶಾಪ ವಿಮೋಚನೆಯ ಫಲವೇನು ?

3.ಈ ನೆಲದೊಡನೆ ತಾನು ಸಹ ಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳಲು ಕಾರಣವೇನು ?

ಪ್ರಶ್ನೆ-4) ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸ್ವಾರಸ್ಯ ಬರೆಯಿರಿ(1 ಕ್ಕೆ) 1*3=3

1."ಹಸುರಾದುದು ಕವಿಯಾತ್ಮಂ"

2."ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"

ಪ್ರಶ್ನೆ-5) ಈ ಕೆಳಗಿನ ಒಬ್ಬರ ಕುರಿತು ಕವಿ ಪರಿಚಯ ವಾಕ್ಯ ರೂಪದಲ್ಲಿ ಬರೆಯಿರಿ. 1*3=3

1.ರನ್ನ

2.ದೇವನೂರು ಮಹಾದೇವ

ಪ್ರಶ್ನೆ-6) ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ,ಗಣ ವಿಂಗಡಿಸಿ ಛಂದಸ್ಸನ್ನು ಹೆಸರಿಸಿ.1*3=3

ಪುಟ್ಟಿದ ನೂರ್ವರು ಮೆನ್ನೊಡೆ

ವುಟ್ಟಿದ ನೂರ್ವರುಮಿದಿರ್ಚೆ ಸತ್ತೊಡೆ ಕೋಪಂ

ಅಥವಾ

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು.

ಮಾದರಿ ಉತ್ತರಗಳು

ಪ್ರಶ್ನೆ-1)



Use epaper, save Trees
Above line hide when print out

1.ತತ್ಪುರುಷ ಸಮಾಸ 2.ಕಜ್ಜ 3.ಸಪ್ತಮಿ

ಪ್ರಶ್ನೆ–2)

1.ಕರ್ಣ 2.ಬನದ ಅಂಚು 3. ಖಿರ್ದಿ ಪುಸ್ತಕ

4.ಎದೆಗೆ ಬಿದ್ದ ಅಕ್ಷರ ಹಾಗೂ ಭೂಮಿಗೆ ಬಿದ್ದ ಬೀಜ

ಪ್ರಶ್ನೆ–3)

1 ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುವನ್ನಾದರೂ ಸರಿಯೇ,ಯಾರಾದರೂ ಬೆನ್ನ ಹಿಂದೆ ಮಾಡಿದರೆ ಆ ವ್ಯಕ್ತಿಗಳನ್ನು ಭರತ ಖಂಡದ ಹುಲಿಗಳು ಕೊಲ್ಲುವುದಿಲ್ಲ.ಅವು ತಮ್ಮ ಧರ್ಮವನ್ನು ಪಾಲಿಸುತ್ತವೆ.

2.ಸುಂದರಿಯು ರಾಜನಾಗಿರುವ ಮೃಗವನ್ನು ಮನಸ್ಸಾರೆ ಪ್ರೀತಿಸಿದ ಕಾರಣದಿಂದ ರಾಜಕುಮಾರನ ಮೃಗತ್ವ ಕರಗಿತು.ಆಗ ರಾಜ ಕುಮಾರ ನಿಜ ಸಂಗತಿ ಹೇಳಿದ.ನಂತರ ತನ್ನ ಮಂತ್ರ ದಂಡನೆಯಿಂದ ರಾಜಕುಮಾರನು ಪ್ರಜೆಗಳನ್ನು ಕರೆದನು.ಆಗ ಅರಮನೆ ಝುಗಝುಗಿಸಿತೊಡಗಿತು.

ಪ್ರಶ್ನೆ–4 ( ಸಂದರ್ಭ 1 ಕ್ಕೆ)

1 “ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ”

ಆಯ್ಕೆ– ಈ ವಾಕ್ಯವನ್ನು ದೇವನೂರು ಮಹಾದೇವನವರು ಬರೆದ ವೈಚಾರಿಕ ಬಿಡಿ ಲೇಖನಗಳಿಂದ ಆಯ್ದ ‘ಎದೆಗೆ ಬಿದ್ದ ಅಕ್ಷರ’ ಗದ್ಯದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ –ಕವಿ ಸಿದ್ದಲಿಂಗಯ್ಯನವರು ದೇವನೂರರಿಗೆ ಹೇಳಿದ ಕಥೆಯಲ್ಲಿ ಈ ಗ್ರಾಮ ದೇವರು ಮೇಲಿನಂತೆ ಹೇಳುತ್ತಾಳೆ.ಒಂದು ದಿನ ಗ್ರಾಮದ ಜನರೆಲ್ಲರೂ ಸೇರಿ ಗ್ರಾಮ ದೇವತೆಗೆ ಗುಡಿ ಕಟ್ಟುತ್ತಿರುತ್ತಾರೆ. ಆಗ ಒಬ್ಬನ ಮೈಮೇಲೆ ಆ ಗ್ರಾಮ ದೇವತೆ ಆಹ್ವಾನಿಸಿಕೊಂಡು ಏನ್ ಮಕ್ಕಳಾ ನಿಮಗೆ ಮನೆ ಉಂಟೆ ಎಂದು ಕೇಳಿದಾಗ ಕೇಲವರೂ ಇಲ್ಲಾ ಏನ್ನುವರು ಆಗ ದೇವತೆ ಈ ಮೇಲಿನ ಮಾತು ಹೇಳುವಳು.

ಸ್ವಾರಸ್ಯ–ಗ್ರಾಮ ದೇವತೆಯು ಈ ಗ್ರಾಮಸ್ಥರಿಗೆ ತನ್ನ ಕಾರುಣ್ಯ ಸಮತೆಯ ಗುಣವನ್ನು ಹಂಚಿಕೊಳ್ಳುವುದು.ಮತ್ತು ತನ್ನ ಕರುಣೆಯನ್ನು ತೋರುವುದು ಇಲ್ಲಿನ ಸ್ವಾರಸ್ಯವಾಗಿದೆ.



Use epaper, save Trees
Above line hide when print out

ಪ್ರಶ್ನೆ–5 ಕವಿ ಪರಿಚಯ( ಬೇಕಾದ 1 ಕ್ಕೆ)

ರನ್ನ –ಇವರು ಕ್ರಿ.ಶ 949 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಜನಿಸಿದರು.ಇವರು ಅನೇಕ ಕೃತಿ ರಚಿಸಿದ್ದಾರೆ.ಸಾಹಸ ಭೀಮ ವಿಜಯ,ಅಜಿತ ತೀರ್ಥಂಕರ ಪುರಾಣ,ಚಕ್ರೇಶ್ವರ ಚರಿತೆ,ಪರಶುರಾಮ ಚರಿತೆ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಕವಿ ಚಕ್ರವರ್ತಿ ಹಾಗೂ ರತ್ನತ್ರಯ ಬಿರುದು ಇದೆ.

ಪ್ರಶ್ನೆ–6 ಕಂದ ಪದ್ಯ

ಪುಟ್ಟಿದ ನೂರ್ವರುಮೆನ್ನೊಡೆ

ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ

ಅಥವಾ

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥ ಭೀಮರು.



Use epaper, save Trees
Above line hide when print out

# ರೂಪಣಾತ್ಮಕ ಪರೀಕ್ಷೆ–4

ವರ್ಗ:–10 ಅಂಕಗಳು :–20 ವಿಷಯ:–ಕನ್ನಡ

ಪ್ರಶ್ನೆ–1) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ 2*1=2

1) ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?

2) ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು ?

ಪ್ರಶ್ನೆ–2) ಈ ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯಗಳಲ್ಲಿ ಉತ್ತರಿಸಿರಿ 2*2=4

1) ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು(ಒಗಟು) ತಿಳಿಸಿ.

2) ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು ?

ಪ್ರಶ್ನೆ–3) ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭದೊಡನೆ ವಿವರಿಸಿರಿ (ಬೇಕಾದ 1ಕ್ಕೆ) 1*3=3

1) "ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡಗುಮ್ "

2) "ಜಾನಕಿಯ ಮಗನಿದಕೆ ಬೆದರುವನೆ "

ಪ್ರಶ್ನೆ–4) ಈ ಕೆಳಗಿನ ಕವಿ ಪರಿಚಯ 1*3=3

1) ಪಂಪ

ಪ್ರಶ್ನೆ–5) ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ,ಗಣ ವಿಂಗಡಿಸಿ ಛಂದಸ್ಸು ಹೆಸರಿಸಿ 1*3=3

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ।
ನೊರ್ವನೇ ವೀರನಾತನ ಯಜ್ಞ ತುರಗವಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

ಅಥವಾ

ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ.

ಪ್ರಶ್ನೆ–6) ಈ ಕೆಳಗಿನ ವ್ಯಾಕರಣಾಂಶ ಪ್ರಶ್ನೆಗಳಿಗೆ ಉತ್ತರಿಸಿರಿ 2*1=2

1) ಪೊಳಲ್ :ಪಟ್ಟಣ ; : ಕಸವರ :

2) ದ್ರವ್ಯಾರ್ಥಿ :ಸವರ್ಣ ದೀರ್ಘ ಸಂಧಿ : : ಮದೋನ್ಮತ್ತ :

ಪ್ರಶ್ನೆ–7 ) ಈ ಕೆಳಗಿನ ಗಾದೆ ಮಾತನ್ನು ವಿವರಿಸಿ ( ಬೇಕಾದ 1 ಕ್ಕೆ ) 1*3=3

1) ಸತ್ಯಕ್ಕೆ ಸಾವಿಲ್ಲ ; ಸುಳ್ಳಿಗೆ ಸುಖವಿಲ್ಲ

2) ಆಳಾಗಬಲ್ಲವನು ಅರಸಾಗಬಲ್ಲ

## ಮಾದರಿ ಉತ್ತರಗಳು

ಪ್ರಶ್ನೆ–1) ಒಂದು ವಾಕ್ಯದ ಪ್ರಶ್ನೆಗಳಿಗೆ ಉತ್ತರಗಳು



Use epaper, save Trees
Above line hide when print out

1) ವಟವೃಕ್ಷವೂ ಸಾಕ್ಷಿ ಹೇಳುವುದು ಎಂದು ತಿಳಿದು ಧರ್ಮಾಧಿಕರಣರು ವಿಸ್ಮಯ ಹೊಂದಿದರು.

2) ಸುಕುಮಾರಸ್ವಾಮಿಗೆ ಶೆಟ್ಟಿ ಪಟ್ಟ ಕಟ್ಟಲಾಯಿತು.

ಪ್ರಶ್ನೆ –2 ) ಎರಡು–ಮೂರು ವಾಕ್ಯದ ಪ್ರಶ್ನೆಗಳಿಗೆ ಉತ್ತರಗಳು

1) "ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ ಮೈಯೊಳಗೆ ನವಗಾಯ ಒಂಬತ್ತು ತುಂಡ ಒಯ್ಯಮೊಯಗಯನೇ ಬಂದು ಹೆಗಲೇರಿಕೊಂಡ ರಾಯ ರಾಯರಿಗೆಲ್ಲ ತಾನೇ ಪ್ರಚಂಡ "

2) ಓಹೋ ವಟವೃಕ್ಷವೇ ನೀನು ದಿವ್ಯ ಯಕ್ಷಾಧಿಗಳ ಆವಾಸ ಸ್ಥಾನ.ಎಲ್ಲರಿಗೂ ನೀನು ಒಳಿತು ಬಯಸುವೆವು.ನೀನು ಸಾಕ್ಷಿ ಹೇಳುವುದು ಉಚಿತ ಎಂದು ಹೇಳಿದರು.

ಪ್ರಶ್ನೆ –3) ಸಂದರ್ಭದೊಡನೆ ವಿವರಿಸಿ ಉತ್ತರ ( ಬೇಕಾದ 1 ಕ್ಕೆ )

1.ಜಾನಕಿಯ ಮಗನಿದಕೆ ಬೆದರುವನೆ "

ಆಯ್ಕೆ :– ಈ ವಾಕ್ಯವನ್ನು ಲಕ್ಷ್ಮೀಶ ಕವಿ ಬರೆದ ಜೈಮಿನಿ ಭಾರತ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ;–ರಾಮನ ಅಶ್ವಮೇಧ ಕುದುರೆ ವಾಲ್ಮೀಕಿಯ ವನವನ್ನು ಹೊಕ್ಕಾಗ ಅಲ್ಲಿ ನೆರೆದ ಶಿಷ್ಯರು ಹೆದರಿದರು.ಆದರೆ ವೀರಲವನು ಅದಕ್ಕೆ ಹೆದರದೆ ಆ ಕುದುರೆಯನ್ನು ಕಟ್ಟಿ ಹಾಕಿದನು. ಆಗ ಈ ಮೇಲಿನ ಮಾತು ಬರುತ್ತದೆ.

ಸ್ವಾರಸ್ಯ :– ವೀರಲವನು ರಾಮನ ಪುತ್ರನಾದರೂ ಕೂಡಾ ಆ ವಿಚಾರ ತಿಳಿಯದೆ ಇದ್ದರೂ ತಾನು ಹೆದರದ ಧೈರ್ಯವಂತ ಎಂದು ತಿಳಿಸುವುದು ಈ ವಾಕ್ಯದ ಸ್ವಾರಸ್ಯವಾಗಿದೆ.

ಪ್ರಶ್ನೆ–4 ) ಛಂದಸ್ಸಿನ ಪ್ರಶ್ನೆ

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ<br>
ನೊರ್ವನೇ ವೀರನಾತನ ಯಜ್ಞ ತುರಗವಿದು<br>
ನಿರ್ವಹಿಸಲಾರ್ಪರಾರಾದೊಡಂ ತಡೆಯಲಿಂದಿರ್ದ ಲೇಖನವನೋದಿ

ಪ್ರಶ್ನೆ–5) ವ್ಯಾಕರಣಾಂಶಗಳು

1) ಚಿನ್ನ 2) ಗುಣ ಸಂಧಿ

ಪ್ರಶ್ನೆ –6) ಗಾದೆ ಮಾತನ್ನು ವಿವರಿಸಿರಿ

ಸತ್ಯಕ್ಕೆ ಸಾವಿಲ್ಲ : ಸುಳ್ಳಿಗೆ ಸುಖವಿಲ್ಲ



Use epaper, save Trees
Above line hide when print out

ಗಾದೆ ಮಾತುಗಳು ವೇದಗಳಿಗೆ ಸಮ.ವೇದಗಳು ಸುಳ್ಳಾದರೂ ಗಾದೆಗಳು ಸುಳ್ಳಾಗದು.ಗಾದೆ ಮಾತು ಹಿರಿಯರ ಜೀವನದ ಅನುಭವದ ನುಡಿಗಳಾಗಿವೆ.ಅಂಥಹ ಗಾದೆ ಮಾತಗಳಲ್ಲಿ ಇದು ಕೂಡಾ ಒಂದಾಗಿದೆ.

ಸತ್ಯ ನುಡಿಯುವುದು ಮನುಷ್ಯನ ಜೀವಾಳ ಆಗಬೇಕು ಆದರೆ ನಾವೂ ಯಾವುದೇ ಸ್ವಾರ್ಥ ಸಾಧನೆಗಾಗಿ ಸುಳ್ಳು ಹೇಳಿದರೆ ಆ ಸುಳ್ಳು ಮರೆ ಮಾಚಲು ಮತ್ತೆ ಹಲವಾರು ಸುಳ್ಳು ಹೇಳಬೇಕಾಗುವುದು.ಇದರಿಂದ ಒಂದಲ್ಲಾ ಒಂದು ನಾವೂ ಹೇಳಿದ್ದು ಸುಳ್ಳು ಅಂತ ತಿಳಿಯುತ್ತದೆ ಅದು ನಮ್ಮ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ. ಅಷ್ಟಕ್ಕೂ ಸತ್ಯಕ್ಕೆ ಸಾವಿಲ್ಲ ಎಂಬ ಮಾತು ನಿಜ.ಎಂಬುದೇ ಈ ಗಾದೆಯ ಅರ್ಥವಾಗಿದೆ.

# ವಂದನೆಗಳು



Use epaper, save Trees
Above line hide when print out